ಮೇಲೆ ತಿಳಿಸಿರುವಂತೆ ಮೂಲ ಯೋಜನೆಯಲ್ಲಿನ ಮಾರ್ಪಾಡುಗಳಿಂದ ಈ ಯೋಜನೆಯ ಅನುಷ್ಠಾನದಲ್ಲಿ ವಿಳಂಬವಾಗಿರುತ್ತದೆ.

ಈ) ಸೇರಿರುವುದಿಲ್ಲ.

ಉ) ಶಿಗ್ಗಾಂವ್-ಸವಣೂರು ಮತ್ತು ಬಂಕಾಪುರ ಪಟ್ಟಣಗಳಿಗೆ ವರದಾ ನದಿಯನ್ನು ಮೂಲವಾಗಿಟ್ಟುಕೊಂಡು ರೂ. 2554.00 ಲಕ್ಷಗಳಿಗೆ ಅಂದಾಜನ್ನು ತಯಾರಿಸಲಾಗಿದ್ದು, ಸರ್ಕಾರದ ಪರಿಶೀಲನೆಯಲ್ಲಿದೆ.

ಊ) ಈ ಯೋಜನೆಯ ಕಾಮಗಾರಿಗಳನ್ನು ಸೆಪ್ಟೆಂಬರ್-2003ರಲ್ಲಿ ಪೂರ್ಣಗೊಳಿಸಲು ಉದ್ದೇಶಿಸಲಾಗಿದೆ.

ರಾಜ್ಯದಲ್ಲಿರುವ ಐ.ಎ.ಎಸ್. ಐ.ಪಿ.ಎಸ್ ಮತ್ತು ಐ.ಎಫ್.ಎಸ್ ಹುದ್ದೆಗಳಲ್ಲಿ ಕರ್ನಾಟಕದ ಕೋಟಾ ಹೆಚ್ಚಿಸುವ ಬಗ್ಗೆ

2598(3426) ಶ್ರೀ ಕೌಜಲಗಿ ಮಹಾಂತೇಶ್ ಶಿವಾನಂದ (ಬೈಲಹೊಂಗಲ) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿ ಎಷ್ಟು ಜನ ಐ.ಎ.ಎಸ್., ಐ.ಪಿ.ಎಸ್., ಮತ್ತು ಐ.ಎಫ್.ಎಸ್., ಅಧಿಕಾರಿಗಳು ಇರುತ್ತಾರೆ;

ಆ) ಇದರಲ್ಲಿ ಕರ್ನಾಟಕ ರಾಜ್ಯದವರು ಎಷ್ಟು ಜನರಿರುವರು ಹಾಗೂ ಹೊರ ರಾಜ್ಯದವರು ಎಷ್ಟು ಜನರಿರುವರು;

ಇ) ಹೊರ ರಾಜ್ಯದ ಅಧಿಕಾರಿಗಳೇ ಹೆಚ್ಚಿಗೆ ಇರುವ ಸಂಗತಿ ನಿಜವೇ;

ಈ) ರಾಜ್ಯದ ಹಿತ ಕಾಪಾಡುವ ದೃಷ್ಟಿಯಿಂದ ಐ.ಎ.ಎಸ್., ಐ.ಪಿ.ಎಸ್., ಮತ್ತು ಐ.ಎಫ್.ಎಸ್. ಹುದ್ದೆಗಳಲ್ಲಿ ಕರ್ನಾಟಕ ರಾಜ್ಯದ ಕೋಟಾ ಹೆಚ್ಚಿಸಲು ಕ್ರಮ ಕೈಗೊಳ್ಳಲಾಗುವುದೇ?

ಶ್ರೀ ಎಸ್.ಎಂ. ಕೃಷ್ಣ (ಮುಖ್ಯಮಂತ್ರಿಗಳು) :

ಅ) ಐ.ಎ.ಎಸ್. – 254
ಐ.ಪಿ.ಎಸ್. – 134
ಐ.ಎಫ್.ಎಸ್. – 159

ಆ) ಐ.ಎ.ಎಸ್. – ಕರ್ನಾಟಕದವರು – 115
ಹೊರ ರಾಜ್ಯದವರು – 139

ಐ.ಪಿ.ಎಸ್. – ಕರ್ನಾಟಕದವರು – 72
ಹೊರ ರಾಜ್ಯದವರು – 62

ಐ.ಎಫ್.ಎಸ್. – ಕರ್ನಾಟಕದವರು – 84
ಹೊರ ರಾಜ್ಯದವರು – 75

ಇ) ಐ.ಎ.ಎಸ್. ಕೇಡರ್‌ನಲ್ಲಿ ಮಾತ್ರ ಹೆಚ್ಚಿಗೆ ಇರುತ್ತದೆ.

ಈ) ರಾಜ್ಯದ ಹಿತ ಕಾಪಾಡುವ ದೃಷ್ಟಿಯಿಂದ ಐ.ಎ.ಎಸ್., ಐ.ಪಿ.ಎಸ್., ಮತ್ತು ಐ.ಎಫ್.ಎಸ್ ಹುದ್ದೆಗಳಲ್ಲಿ ಕರ್ನಾಟಕ ರಾಜ್ಯದ ಕೋಟಾವನ್ನು ಶೇಕಡಾ 33 1/3 ರಿಂದ ಶೇಕಡ 50 2/3ಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿತ್ತು. ಆದರೆ ಕೇಂದ್ರ ಸರ್ಕಾರವು ಪ್ರಸ್ತಾವ ಒಪ್ಪಿಕೊಂಡಿರುವುದಿಲ್ಲ.